## ಕ್ಯಾನ್ಸರ್ ಹಂತ ಎಂದರೇನು?

ಕ್ಯಾನ್ಸರ್ ರೋಗ ಪತ್ತೆಯಾದಾಗ, ಅದು ಶರೀರದಲ್ಲಿ ಎಷ್ಟರಮಟ್ಟಿಗೆ ಹರಡಿದೆ ಎಂಬುದನ್ನು ಸೂಚಿಸುವ ಸಂಗತಿಯನ್ನು 'ಕ್ಯಾನ್ಸರ್ ಹಂತ' ಎನ್ನುತ್ತಾರೆ. ಸ್ತನ ಕ್ಯಾನ್ಸರ್, ಕೋಲನ್ ಕ್ಯಾನ್ಸರ್, ಶ್ವಾಸಕೋಶ, ಗರ್ಭಕೋಶ ಕ್ಯಾನ್ಸರ್, ಮೆದುಳಿನ ಕ್ಯಾನ್ಸರ್, ಮೂಳೆ ಕ್ಯಾನ್ಸರ್ ಇತ್ಯಾದಿ ಘನ ರೂಪದ ಗಡ್ಡೆಗಳಾಗಿ ಕಾಡುವ ಕ್ಯಾನ್ಸರ್ ಅನ್ನು ಹಂತಗಳಲ್ಲಿ ತಿಳಿಸುತ್ತಾರೆ. ಕ್ಯಾನ್ಸರ್ ಹಂತವನ್ನು 0, 1, 2, 3 ಮತ್ತು 4 ಎಂಬ ಸಂಖ್ಯೆಗಳ ಮೂಲಕ ಗುರುತಿಸುತ್ತಾರೆ.

'0' ಹಂತ: ಈ ಹಂತದಲ್ಲಿ ಕ್ಯಾನ್ಸರ್ ಕೋಶಗಳು ಒಂದು ನಿರ್ದಿಷ್ಟ ಜಾಗದಲ್ಲಿ ಉಪಸ್ಥಿತವಾಗಿವೆ, ಮತ್ತು ಅವು ಇನ್ನೂ ವೃದ್ಧಿಯಾಗಿರುವುದಿಲ್ಲ.

ಹಂತ1: ಈ ಹಂತದಲ್ಲಿ ಕ್ಯಾನ್ಸರ್ ಕೋಶಗಳು ಹತ್ತಿರದ ಸ್ನಾಯುಗಳಿಗೆ ಸ್ವಲ್ಪ ಮಟ್ಟಿಗೆ ಹರಡಿರುತ್ತವೆ. ಅವು ಬೇರೆ ಲಿಂಫ್ ನೋಡ್‌ಗಳಿಗೆ ಅಥವಾ ಇತರ ಅಂಗಗಳಿಗೆ ಹರಡಿರುವುದಿಲ್ಲ.

ಹಂತ–2 ಮತ್ತು ಹಂತ3: ಈ ಹಂತಗಳಲ್ಲಿ ಕ್ಯಾನ್ಸರ್ ಹತ್ತಿರದ ಸ್ನಾಯುಗಳಿಗೆ ಅಥವಾ ಲಿಂಫ್ ನೋಡ್‌ಗಳಿಗೆ ಹರಡಿರುತ್ತದೆ.

ಹಂತ4: ಈ ಹಂತದಲ್ಲಿ ಕ್ಯಾನ್ಸರ್ ರೋಗ ಉಲ್ಬಣವಾಗಿರುತ್ತದೆ ಹಾಗೂ ಶರೀರದ ಇತರ ಅಂಗಗಳಿಗೆ ಹರಡಿರುತ್ತದೆ.

## ಕೋಲನೋಸ್ಕೋಪಿ ಎಂದರೇನು?

ಕೋಲನೋಸ್ಕೋಪಿ ಎನ್ನುವುದು ದೊಡ್ಡ ಕರುಳಿನ ಆಂತರಿಕ ತಪಾಸಣಾ ವಿಧಾನ. ಮಲದಲ್ಲಿ ರಕ್ತ, ಅಕಾರಣವಾಗಿ ಕಪ್ಪು ಬಣ್ಣದ ಮಲವಿಸರ್ಜನೆ, ಗುದದ್ವಾರದ ಮೂಲಕ ರಕ್ತಸ್ರಾವ ಮುಂತಾದ ತೊಂದರೆಗಳುಂಟಾದಾಗ, ಕೋಲನ್ ಕ್ಯಾನ್ಸರ್, ಪಾಲಿಪ್‌ಗಳು, ಅಥವಾ ಅಸಹಜ ಬೆಳವಣಿಗೆಗಳನ್ನು ಕಂಡುಹಿಡಿಯುವ ಸಲುವಾಗಿ ಈ ಪರೀಕ್ಷೆ ಮಾಡಲಾಗುತ್ತದೆ.

## PET ಸ್ಕ್ಯಾನ್ ಎಂದರೇನು?

'ಪಾಸಿಟ್ರಾನ್ ಎಮಿಷನ್ ಟೋಮೋಗ್ರಫಿ' ಅನ್ನು ಕ್ಯಾನ್ಸರ್, ನರಸಂಬಂಧಿ ಹಾಗೂ ರೋಗಗಳ ತಪಾಸಣೆಯಲ್ಲಿ ಉಪಯೋಗಿಸುತ್ತಾರೆ. ಈ ವಿಧಾನದ ಮೂಲಕ ವಿಕಿರಣಗಳನ್ನು ಬಳಸಿ, ಕಂಪ್ಯೂಟರ್ ಪರದೆಯ ಮೇಲೆ ರೋಗಿಯ ಶರೀರದಲ್ಲಿ ಕೋಶ ಮಟ್ಟದಲ್ಲಿನ ಚಟುವಟಿಕೆಗಳನ್ನು ವೀಕ್ಷಿಸಬಹುದು. ಇದರಿಂದ ಶರೀರದಲ್ಲಿನ ವಿವಿಧ ಅಂಗಗಳ ಕಾರ್ಯನಿರ್ವಹಣೆಯ ಬಗ್ಗೆ ಬಹು ಆಯಾಮದ ವರ್ಣಚಿತ್ರಗಳನ್ನು ಪಡೆಯಬಹುದು.

---

ಮೇಲೂ ನನ್ನ ಮನಸ್ಸಿನಲ್ಲಿ ಆತಂಕ ಮನೆ ಮಾಡಿತ್ತು. ವೈದ್ಯರ ಮುಂದೆ ಕಷ್ಟಪಟ್ಟು ಅಳು ತಡೆದುಕೊಂಡೆ. ಅವರು ಹೇಳಿದ್ದನ್ನು ಕೇಳಿಸಿಕೊಂಡರೂ ಆತಂಕ ಮಾತ್ರ ಜೋರಾಗಿಯೇ ಇತ್ತು.

ಮನೆಗೆ ಬಂದ ಮೇಲೆ ಅದೇ ಯೋಚನೆ. ಈ ಪರಿಸ್ಥಿತಿಯನ್ನು ಹೇಗೆ ಎದುರಿಸಬೇಕು? ಯಾವುದರ ಬಗ್ಗೆ ನಾನು ನಿರ್ಲಕ್ಷ್ಯ ತಾಳಿದ್ದೆನೋ, ಅದು ನನ್ನ ಸಂಪೂರ್ಣ ಗಮನವನ್ನು ಸೆಳೆದು, 'ಈಗೇನಂತಿ?' ಎಂದು ಸವಾಲೆಸೆಯಿತು. ಕ್ಯಾನ್ಸರ್ ಚಿಕಿತ್ಸೆಯಲ್ಲಿ ವಿಕಿರಣ ಚಿಕಿತ್ಸೆ, ಶಸ್ತ್ರಚಿಕಿತ್ಸೆ, ಕಿಮೋಥೆರಪಿ ಮುಂತಾದ ಅತ್ಯಂತ ಪ್ರಯಾಸಕರ ಹಾಗೂ ಸುದೀರ್ಘ ಚಿಕಿತ್ಸಾ ವಿಧಾನಕ್ಕೆ ಒಳಗಾಗಬೇಕೆಂಬ ಅಲ್ಪ ತಿಳಿವಳಿಕೆ ನನಗಿದ್ದುದರಿಂದ ಮುಂದಿನ ದಿನಗಳು ಕಷ್ಟಕರ ದಿನಗಳೆಂಬ ಕಹಿ ಸತ್ಯದ ಅರಿವಾಯಿತು.

ನನ್ನ ಯೋಚನಾ ಲಹರಿ ಹೀಗೆ ಸಾಗಿತ್ತು. ನಾನು ಕ್ಯಾನ್ಸರ್ ರೋಗಿಯೆಂದು ಖಾತ್ರಿಯಾಗಿದೆ. ಬಹುಶಃ ನಾನು ಹೆಚ್ಚು ದಿನ ಬದುಕದೆ ಸಾಯಲೂಬಹುದು. ಅಥವಾ ಭಗವಂತನ ದಯೆಯಿಂದ ಚಿಕಿತ್ಸೆ ಯಶಸ್ವಿಯಾಗಿ ಅದರಿಂದ ಹೊರಬರಲೂಬಹುದು. ಸಾವು ಎಂಬ ಪದವೇ ಮನಸ್ಸನ್ನು ಅಧೀರಗೊಳಿಸುತ್ತದೆ. ಆದರೆ ಈ ಪರಿಸ್ಥಿತಿಯಲ್ಲಿ ನಾನು ಸಾವಿಗೆ ಹೆದರಬೇಕೆ? ಹುಟ್ಟಿದ ಮೇಲೆ ಒಂದಲ್ಲ ಒಂದು ದಿನ ಸಾವು ಖಚಿತ ಎಂಬುದು ನಿತ್ಯ ಸತ್ಯ. ಕ್ಯಾನ್ಸರ್ ಎಂದ ಕೂಡಲೇ ನೋವು, ಪ್ರಯಾಸಕರ ಚಿಕಿತ್ಸೆ ಇದೆಲ್ಲ ತಪ್ಪುವಂತಹುದಲ್ಲ. ಯಾವುದರಿಂದ ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲವೋ, ಅದನ್ನು ಧೈರ್ಯದಿಂದ ಎದುರಿಸಿದರೆ ಒಳಿತಲ್ಲವೇ? ಪರಿಸ್ಥಿತಿಗೆ ಹೆದರುವುದರಿಂದ, ನನ್ನ ಪರಿಸ್ಥಿತಿಗೆ ನಾನೇ ಮರುಗಿ ಸದಾಕಾಲ ಅಳುವುದು, ಖಿನ್ನಳಾಗುವುದರಿಂದ ಯಾವ ಪ್ರಯೋಜನವೂ ಇಲ್ಲವೆಂಬ ಕಹಿಸತ್ಯ ಮನಸ್ಸಿನಾಳಕ್ಕಿಳಿಯಿತು. ಹೆದರಿಕೆ, ಆತಂಕಗಳಿಂದ ಖಿನ್ನತೆಗೊಳಗಾಗಬಹುದು ಎನ್ನಿಸಿತು. ಕೋಪತಾಪಗಳಿಂದ, ಭಾವನೆಗಳ ತಾಕಲಾಟದಿಂದ ಮನಸ್ಸು ಖತಿಗೊಂಡು ನನಗೆ ಬೆಂಬಲವಾಗಿ ನಿಂತಿರುವ, ನನ್ನ ಪ್ರೀತಿಯ ಕುಟುಂಬದವರ ಮೇಲೆ ಸಣ್ಣಪುಟ್ಟ ವಿಷಯಗಳಿಗೆ ನಾನು ರೇಗಾಡಬಹುದು, ಇಲ್ಲವೇ ಸುಮ್ಮನೆ ಮಾತುಮಾತಿಗೂ ಅಳತೊಡಗಬಹುದು. ಆಗ ಅವರ ಮನಸ್ಥಿತಿ ಏನಾಗಬೇಡ? ಹೀಗೆಲ್ಲ ಮಾಡುವುದು ಖಂಡಿತ ಸರಿಯಲ್ಲ ಎಂಬ ಭಾವನೆ ಬೆಳೆಯಿತು.

ಹಾಗಾದರೆ ನಾನೇನು ಮಾಡಬೇಕು? ನನಗೆ ಮನಸ್ಥೈರ್ಯ ನೀಡಲು ನಾನು ನನ್ನ ಇಷ್ಟದೈವಗಳ ಮೊರೆ ಹೋದೆ. ಹಿಂದೊಮ್ಮೆ, **'When the going gets tough, the tough get going'** ಎಂಬ ಪುಸ್ತಕ ಓದಿದ ನೆನಪಾಯಿತು. ದೃಢ ಮನಸ್ಸು, ಮನಸ್ಥೈರ್ಯ, ಧನಾತ್ಮಕ ಮನೋಭಾವ ಇವೆಲ್ಲವೂ ಕ್ಯಾನ್ಸರ್ ಎದುರಿಸಲು ಅಗತ್ಯ ಎಂದು ಅರಿವಾಯಿತು. ನನ್ನ ಮುಂದಿರುವ **tough going**ನಲ್ಲಿ ನಾನು **'tough'** ಆಗಬೇಕು. ಆಗಲೇ ನಾನದನ್ನು ಧೈರ್ಯವಾಗಿ ಎದುರಿಸಬಲ್ಲೆ, ಹಾಗಿಲ್ಲದೆ ಹೋದರೆ, ನನ್ನ ಚೇತರಿಕೆಯ ಅವಕಾಶವನ್ನು ಕಳೆದುಕೊಳ್ಳಬಹುದು ಕೂಡ ಎಂದು ತೀರ್ಮಾನಿಸಿ, ನನ್ನ ಮನಸ್ಸನ್ನು ಗಟ್ಟಿ ಮಾಡಿಕೊಂಡೆ.

ಕ್ಯಾನ್ಸರ್ ಚಿಕಿತ್ಸೆ ಒಂದು ವರ್ಷಕಾಲ ನಡೆಯಬಹುದು. ಆ ಸಮಯದಲ್ಲಿ ಧೈರ್ಯಗೆಟ್ಟು, ನಿರಾಶೆಗೆಡೆ ಮಾಡಿಕೊಟ್ಟರೆ, ಮನೋರೋಗದಿಂದಾಗಿ ಕ್ಯಾನ್ಸರ್‌ನಿಂದ ಮುಕ್ತಿ ಹೊಂದುವುದು ಕಷ್ಟಕರವಾಗುವ ಸಂಭವವಿರುತ್ತದೆ. ಇವೆಲ್ಲ ಯೋಚನೆಗಳೂ ನನಗೆ ಧೈರ್ಯ ತುಂಬಿದವು. ಧನಾತ್ಮಕ ಚಿಂತನೆಯಿಂದ ಈ ಕ್ಲಿಷ್ಟ ಪರಿಸ್ಥಿತಿಯಿಂದ ಹೊರಬರಬಲ್ಲೆನೆಂಬ ಆತ್ಮವಿಶ್ವಾಸ ಮೂಡಿತು.

ವೈದ್ಯಕೀಯ ತಪಾಸಣೆಯ ವರದಿಗಳೊಂದಿಗೆ ಕ್ಯಾನ್ಸರ್ ಶಸ್ತ್ರಚಿಕಿತ್ಸಾ ತಜ್ಞ **(Surgical oncologist)** ಡಾ. ಜವೇರಿಯವರನ್ನು ಭೇಟಿ ಮಾಡಿದೆವು. ಅವರು ವರದಿಗಳನ್ನೆಲ್ಲಾ ಪರೀಕ್ಷಿಸಿದ ನಂತರ ಕೇಳಿದ ಮೊದಲ ಪ್ರಶ್ನೆ, 'ನೀವು ಮಾಂಸಾಹಾರಿಗಳೇ?'. ನಾನು ಇಲ್ಲ ಎಂದಾಗ, ಇದು ಸಾಮಾನ್ಯವಾಗಿ ಮಾಂಸಾಹಾರಿಗಳಿಗೆ ಬರುವ ಕ್ಯಾನ್ಸರ್ ಎಂದುತ್ತರಿಸಿದರು. ನಿಮಗೆ ಹೇಗೆ ಬಂತು ಎಂದು ಅಚ್ಚರಿಪಟ್ಟರು. 'ಮೂರನೆಯ ಹಂತದಲ್ಲಿರುವ ನಿಮ್ಮ ಕ್ಯಾನ್ಸರ್ ಶಸ್ತ್ರಚಿಕಿತ್ಸೆಯಿಂದ ವಾಸಿಯಾಗುವ ಸಂಭವ ಶೇ. 60ರಷ್ಟು' ಎಂದಾಗ ಏನೋ ಒಂದು ರೀತಿಯ ಸಮಾಧಾನ.

ಶಸ್ತ್ರಚಿಕಿತ್ಸೆಗೆ ಮೊದಲು ನನಗೆ ವಿಕಿರಣ ಚಿಕಿತ್ಸೆ ನೀಡಲಾಯಿತು. ಆರಾಧ್ಯ ದೈವದ ಧ್ಯಾನದಲ್ಲಿ ಕಣ್ಣು ಮುಚ್ಚಿ ಮಲಗಿದರೆ ಚಿಕಿತ್ಸೆ ಮುಗಿದ ನಂತರವೇ ನಾನು ಕಣ್ಣು ಬಿಡುತ್ತಿದ್ದುದು. ಅಂತೂ ನನಗೆ 28 ಬಾರಿ ವಿಕಿರಣ ಚಿಕಿತ್ಸೆ ನಡೆಯಿತು. ವಿಕಿರಣ ಚಿಕಿತ್ಸೆಯಿಂದಲೇ ಕ್ಯಾನ್ಸರ್ ಗುಣಪಡಿಸಲಾಗುವುದಿಲ್ಲ. ಆದರೆ ಕ್ಯಾನ್ಸರ್ ಪೀಡಿತ ಭಾಗಕ್ಕೆ ನೀಡುವ ವಿಕಿರಣ ಚಿಕಿತ್ಸೆಯಿಂದ ಸಾಕಷ್ಟು ಪ್ರಮಾಣದಲ್ಲಿ ಕ್ಯಾನ್ಸರ್ ಕೋಶಗಳು ಸಾಯುತ್ತವೆ ಮತ್ತು ಕ್ಯಾನ್ಸರ್ ಗಡ್ಡೆಯ ಗಾತ್ರ ಕುಗ್ಗುತ್ತದೆ. ಅದೃಷ್ಟವಶಾತ್, ರಕ್ತ ಬೀಜಾಸುರನಂತೆ ಸತ್ತ ಕೋಶಗಳು ಮರುಜೀವ ಪಡೆಯುವುದಿಲ್ಲ ಎಂಬುದೇ ಸಮಾಧಾನದ ಸಂಗತಿ. ಕ್ಯಾನ್ಸರ್ ಪೀಡಿತ ಭಾಗಕ್ಕೆ ವಿಕಿರಣ ಚಿಕಿತ್ಸೆ ನೀಡಿದಾಗ ಅದರ ಸುತ್ತಲಿನ ಆರೋಗ್ಯಕರ ಕೋಶಗಳೂ ನಾಶವಾಗುತ್ತವೆ. ಈ ಆರೋಗ್ಯಕರ ಕೋಶಗಳು ಮತ್ತೆ ಬೆಳೆಯಬಹುದಾದಂತಹ ಅತ್ಯುತ್ತಮ ದೇಹ ರಚನಾ ವ್ಯವಸ್ಥೆ ನಮ್ಮದಾಗಿರುತ್ತದೆ ಎನ್ನುವುದು ಸಮಾಧಾನಕರ ಸಂಗತಿ.

ವಿಕಿರಣ ಚಿಕಿತ್ಸೆಯ ಸಂದರ್ಭದಲ್ಲಿ ಯಾವುದೇ ರೀತಿಯ ಬದಲಾವಣೆ ಕಂಡು ಬಂದರೆ ತಕ್ಷಣ ವೈದ್ಯರಿಗೆ ತಿಳಿಸಬೇಕಾದುದು ರೋಗಿಯ ಕರ್ತವ್ಯ. ನನ್ನ ವಿಕಿರಣ ಚಿಕಿತ್ಸಾ ಕಾಲದಲ್ಲಿ, ಚಿಕಿತ್ಸೆಗೆ ಮುಕ್ಕಾಲು ಗಂಟೆಗೆ ಮೊದಲು, ಸುಮಾರು